## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದಲ್ಲಿ 2016-17ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆ ಹಾಗೂ ಹವಾಮಾನ ಆಧಾರಿತ ಬೆಳೆವಿಮಾ ಯೋಜನೆ ಅನುಷ್ಠಾನ ಸಂಬಂಧ ಕ್ಲಸ್ಟರ್‌ವಾರು ವಿಮಾ ಸಂಸ್ಥೆಗಳನ್ನು ನಿಗಧಿಪಡಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕೃಇ/12/ಕೃಉಇ/2016, ಬೆಂಗಳೂರು.ದಿ:26-05-2016.
2. ಸರ್ಕಾರದ ಆದೇಶ ಸಂಖ್ಯೆ: ಕೃಇ 12 ಕೃಉಇ 2016, ದಿ: 10.06.2016.
3. ಸರ್ಕಾರದ ಆದೇಶ ಸಂಖ್ಯೆ:ಕೃಇ/110/ಕೃಕೈಉ/2016,ಬೆಂಗಳೂರು; ದಿನಾಂಕ:07-10-2016, ಸೇರ್ಪಡೆ ದಿ:08-11-2016 & ದಿ:18-11-2016
4. ಕೃಷಿ ಇಲಾಖೆಯ ಏಕ ಕಡತ ಸಂಖ್ಯೆ:ಉಕೃನಿ(ಬೆವಿ)/ತಾಂ-1/PMFBY-Rabi&Summer Tender/2016-17

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಆದೇಶದಲ್ಲಿ 2016-17ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಹಾಗು ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಗಳನ್ನು ಲೆಕ್ಕ ಶೀರ್ಷಿಕೆ: 2401-00-110-0-07 (ಯೋಜನೆ)ಅಡಿಯಲ್ಲಿ ರೂ. 675.38 ಕೋಟಿಗಳ ಅವಕಾಶವನ್ನು ಕಲ್ಪಿಸಿಕೊಂಡು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ..

2016-17ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಯೂನಿವರ್ಸಲ್ ಸೋಂಪೋ ವಿಮಾ ಸಂಸ್ಥೆ ಹಾಗೂ ಟಾಟಾ ಎ.ಐ.ಜಿ. ವಿಮಾ ಸಂಸ್ಥೆಗಳು ನೀಡಿರುವ ಕ್ಲಸ್ಟರ್‌ವಾರು, ಬೆಳೆವಾರು ವಿಮಾ ಕಂತಿನ ದರಗಳಂತೆ ಕ್ಲಸ್ಟರ್ – 1 &2 ರಲ್ಲಿನ ಜಿಲ್ಲೆಗಳಲ್ಲಿ ಯೂನಿವರ್ಸಲ್ ಸೋಂಪೋ ವಿಮಾ ಸಂಸ್ಥೆ ಹಾಗೂ ಕ್ಲಸ್ಟರ್ – 3 ರಲ್ಲಿನ ಜಿಲ್ಲೆಗಳಲ್ಲಿ ಟಾಟಾ ಎ.ಐ.ಜಿ. ವಿಮಾ ಸಂಸ್ಥೆಗಳು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಹಾಗೂ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಉಲ್ಲೇಖ (2)ರ ಆದೇಶದಲ್ಲಿ ಮಂಜೂರಾತಿ ನೀಡಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಯೂನಿಫೈಡ್ ಪ್ಯಾಕೇಜ್ ಇನ್ಸೂರೆನ್ಸ್ ಸ್ಕೀಮ್ (UPIS) ಅನ್ನು ರಾಜ್ಯದ ಬೆಳಗಾವಿ (ಕ್ಲಸ್ಟರ್-1) ಮತ್ತು ಚಿತ್ರದುರ್ಗ(ಕ್ಲಸ್ಟರ್-3) ಜಿಲ್ಲೆಗಳಲ್ಲಿ ಬೆಳೆ ವಿಮಾ ಯೋಜನೆಗಳ ಜೊತೆಗೆ ಆಯಾ ವಿಮಾ ಸಂಸ್ಥೆಗಳು ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ.

ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ರಾಜ್ಯದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿಯಲ್ಲಿ ಒಟ್ಟು 19 ಆಹಾರ ಮತ್ತು ಎಣ್ಣೆಕಾಳು ಬೆಳೆಗಳನ್ನು 2016-17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿಗೆ ಹೋಬಳಿ ಮತ್ತು ಗ್ರಾಮ ಪಂಚಾಯತಿ ಮಟ್ಟಕ್ಕೆ ಅಳವಡಿಸಿ ಅನುಷ್ಠಾನಗೊಳಿಸಲು ಅಧಿಸೂಚಿಸಲಾಗಿದೆ. ಮುಂದುವರೆದು, ಸೇರ್ಪಡೆ ಆದೇಶಗಳಲ್ಲಿ ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಕಡಲೆ (ಮ.ಆ) ಬೆಳೆಗೆ ಗ್ರಾಮವನ್ನು ವಿಮಾ ಘಟಕವೆಂದು ಪರಿಗಣಿಸಿ 7 ಗ್ರಾಮ ಪಂಚಾಯತಿಗಳ ಎಲ್ಲಾ ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಅಧಿಸೂಚಿಸಿದ್ದು, ಸದರಿ ಗ್ರಾಮ ಪಂಚಾಯಿತಿಗಳಲ್ಲಿ

ಕಡಲೆ (ಮ.ಆ) ಬೆಳೆಯನ್ನು ಮಾತ್ರ ಗ್ರಾಮ ಪಂಚಾಯತಿ ಮಟ್ಟದ ಅಧಿಸೂಚನೆಯಿಂದ ಕೈಬಿಡಲು ಆದೇಶಿಸಲಾಗಿರುತ್ತದೆ.

2016-17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಹಾಗೂ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಗಳಡಿ ವಿಮಾ ಕಂತಿನ ದರಗಳನ್ನು ನೀಡಲು ಕೇಂದ್ರ ಸರ್ಕಾರ ಆಯ್ಕೆ ಮಾಡಿರುವ 16 ವಿವಿಧ ವಿಮಾ ಸಂಸ್ಥೆಗಳಿಂದ ಬಿಡ್ ಕರೆಯಲಾಗಿತ್ತು. ಅದರಂತೆ 5 ವಿಮಾ ಸಂಸ್ಥೆಗಳು ಮಾತ್ರ ಕ್ಲಸ್ಟರ್‌ವಾರು, ಬೆಳೆವಾರು ವಿಮಾ ಕಂತಿನ ದರಗಳನ್ನು ನೀಡಿರುತ್ತಾರೆ. ವಿಮಾ ಸಂಸ್ಥೆಗಳು ನೀಡಿರುವ ಕ್ಲಸ್ಟರ್‌ವಾರು, ಬೆಳೆವಾರು ವಿಮಾ ಕಂತಿನ ದರಗಳನ್ನು ಮೌಲ್ಯಮಾಪನ ಮಾಡಿ, weighted premium rates ಅನ್ನು ಲೆಕ್ಕ ಹಾಕಿದ್ದು, ಕ್ಲಸ್ಟರ್‌ವಾರು, ವಿಮಾ ಸಂಸ್ಥೆವಾರು weighted premium rate ಗಳು ಈ ಕೆಳಗಿನಂತಿರುತ್ತವೆ.

| Cluster | AIC | United India Insurance Co.Ltd. | Future Generali | Universal Sompo | Sri Ram GIC |
|---|---|---|---|---|---|
| Cluster 1 | 18.41% | 16.85% | 44.03% | 27.50% | 15.88% |
| Cluster 2 | 19.42% | 21.68% | 39.29% | 30.00% | 25.60% |
| Cluster 3 | 15.18% | 13.77% | 36.40% | 27.50% | 16.02% |
| Cluster 4 | 11.73% | 14.95% | 33.80% | 25.00% | 13.74% |

2016-17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಕ್ಲಸ್ಟರ್‌ವಾರು ಅತಿ ಕಡಿಮೆ ವಿಮಾ ಕಂತಿನ ದರಗಳನ್ನು ನೀಡಿರುವ ವಿಮಾ ಸಂಸ್ಥೆಗಳ ವಿವರ ಈ ಕೆಳಗಿನಂತಿರುತ್ತದೆ.

| Cluster | Insurance Company | L1 rates |
|---|---|---|
| Cluster 1 | Sriram | 15.88% |
| Cluster 2 | AIC | 19.42% |
| Cluster 3 | UIIC | 13.77% |
| Cluster 4 | AIC | 11.73% |

ಮೇಲಿನಂತೆ ವಿಮಾ ಸಂಸ್ಥೆಗಳಿಗೆ ಕ್ಲಸ್ಟರ್‌ಗಳನ್ನು ಹಂಚಿಕೆ ಮಾಡುವ ಕುರಿತು ಅನುಮೋದನೆ ನೀಡುವಂತೆ ಕೃಷಿ ಆಯುಕ್ತರು ಉಲ್ಲೇಖ (4) ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 146 ಕೃಉಇ 2016, ಬೆಂಗಳೂರು, ದಿನಾಂಕ: 23-11-2016.**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ 2016-17ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ ಹಾಗೂ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಗಳಡಿ ಕ್ಲಸ್ಟರ್ – 1 ರಲ್ಲಿನ ಜಿಲ್ಲೆಗಳಲ್ಲಿ ಶ್ರೀರಾಮ್ ವಿಮಾ ಸಂಸ್ಥೆ, ಕ್ಲಸ್ಟರ್ – 2&4ರಲ್ಲಿನ ಜಿಲ್ಲೆಗಳಲ್ಲಿ ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿ., ವಿಮಾ ಸಂಸ್ಥೆ ಹಾಗೂ ಕ್ಲಸ್ಟರ್– 3 ರಲ್ಲಿನ ಜಿಲ್ಲೆಗಳಲ್ಲಿ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ವಿಮಾ ಸಂಸ್ಥೆಗಳು ಅನುಬಂಧದಲ್ಲಿ ವಿವರಿಸಿರುವ ಜಿಲ್ಲಾವಾರು, ಬೆಳೆವಾರು ವಿಮಾ ಕಂತಿನ ದರಗಳನ್ನೂಯು ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಹಾಗೂ ಹವಾಮಾನ ಆಧಾರಿತ ಬೆಳೆ ವಿಮಾ

ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ಮೂಲಕ ಮಂಜೂರಾತಿ ನೀಡಿದೆ. ಸದರಿ ಸಂಸ್ಥೆಗಳಿಗೆ ರಾಜ್ಯದ ಪಾಲಿನ ವಿಮಾಮೊತ್ತವನ್ನು ಲೆಕ್ಕ ಶೀರ್ಷಿಕೆ: 2401-00-110-0-07 (ಯೋಜನೆ)ಅಡಿಯಲ್ಲಿ ಒದಗಿಸಲಾಗಿರುವ ಅನುದಾನದಿಂದ ಭರಿಸಲು ಅನುಮತಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
ಆರ್.ಎಸ್.ಶಿವಕುಮಾರ್
**(ಆರ್.ಎಸ್.ಶಿವಕುಮಾರ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), (ಇ & ಆರ್ ಎಸ್ ಎ), (ಎ & ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿರವರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ.
4. ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ರಾಜ್ಯದ ಬೆಳೆ ವಿಮಾ ಸಮಿತಿಯ ಎಲ್ಲಾ ಸದಸ್ಯರಿಗೆ.(ಕೃಷಿ ಆಯುಕ್ತರ ಮುಖಾಂತರ)
6. ನಿರ್ದೇಶಕರು ತೋಟಗಾರಿಕೆ ಇಲಾಖೆ, ಬೆಂಗಳೂರು
7. ಕೃಷಿ ಆಯುಕ್ತರು, ಬೆಂಗಳೂರು.
8. ಕೃಷಿ ನಿರ್ದೇಶಕರು, ಬೆಂಗಳೂರು.
9. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.
10. ನಿರ್ದೇಶಕರು (ಪಿಎಫ್‌ಡಿ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಎಲ್ಲಾ ಜಿಲ್ಲಾಧಿಕಾರಿಗಳು.
12. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
13. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು
14. ಎಲ್ಲಾ ಜಿಲ್ಲಾ ಉಪ ತೋಟಗಾರಿಕಾ ನಿರ್ದೇಶಕರು
15. ಎಲ್ಲಾ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು.
16. ಎಲ್ಲಾ ಲೀಡ್ ಬ್ಯಾಂಕುಗಳು.
17. ಎಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು.
18. ಎಲ್ಲಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು.
19. ಎಲ್ಲಾ ನೋಡಲ್ ಬ್ಯಾಂಕುಗಳು.
20. ಪ್ರಾದೇಶಿಕ ವ್ಯವಸ್ಥಾಪಕರು, ಅಗ್ರಿಕಲ್ಚರ್ ಇನ್ಸೂರೆನ್ಸ್ ಕಂಪನಿ ಆಫ್ ಇಂಡಿಯಾ ಲಿಮಿಟೆಡ್, ಕರ್ನಾಟಕ ಪ್ರಾದೇಶಿಕ ಕಛೇರಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜ, ನಂ.18, 3ನೇ ಮಹಡಿ, ನೃಪತುಂಗ ರಸ್ತೆ, ಹಡ್ಸನ್ ವೃತ್ತ, ಬೆಂಗಳೂರು.
21. ಪ್ರಾದೇಶಿಕ ವ್ಯವಸ್ಥಾಪಕರು, ಶ್ರೀರಾಮ್ ವಿಮಾ ಸಂಸ್ಥೆ.
22. ಪ್ರಾದೇಶಿಕ ವ್ಯವಸ್ಥಾಪಕರು, ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ವಿಮಾ ಸಂಸ್ಥೆ.
23. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -4), ಬೆಂಗಳೂರು.
24. ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಬೆಂಗಳೂರು.
25. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
26. ರಕ್ಷಾ ಕಡತ : ಹೆಚ್ಚುವರಿ ಪ್ರತಿ.

(ಕ್ರಮ ಸಂಖ್ಯೆ: 5 ಮತ್ತು 11 ರಿಂದ 13 ರವರೆಗೆ ಹಾಗೂ 21 ಮತ್ತು 22ರವರೆಗೆ ಕೃಷಿ ನಿರ್ದೇಶಕರ ಮೂಲಕ
ಕ್ರಮ ಸಂಖ್ಯೆ: 14, ನಿರ್ದೇಶಕರು ತೋಟಗಾರಿಕೆ ಇಲಾಖೆರವರ ಮೂಲಕ ಹಾಗೂ
ಕ್ರಮ ಸಂಖ್ಯೆ: 15–19 ರವರೆಗೆ ವಿಮಾ ಸಂಸ್ಥೆಯ ಮೂಲಕ)

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಮುಖ್ಯಮಂತ್ರಿರವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಮಾನ್ಯ ತೋಟಗಾರಿಕೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.